# ಹೂವು ಮುಡಿಯುವ ಸಂಭ್ರಮ

ಮೊನ್ನೆ ತಾನೇ ಗೆಳತಿ ಭಾರ್ಗವಿಯವರೊಂದಿಗೆ ಮಾತಾಡುತ್ತಿರುವಾಗ ಒಂದು ಸರ್ವೇಸಾಮಾನ್ಯವಾದ ಆದರೆ ಅಷ್ಟೇ ಆಸಕ್ತಿಕರವಾದ ವಿಷಯ ಹೇಳಿದರು – "ಹಳ್ಳಿಯವರಾದ ನಾವೆಲ್ಲ ಹೂವು ಕೊಯ್ಯುವುದು ಅಥವಾ ಹೂವು ಕೀಳುವುದು ಎನ್ನುತ್ತೇವೆ. ಆದರೆ ನೀನು ಗಮನಿಸಿದ್ದೀಯಾ? ಬೆಂಗಳೂರಿನ ಜನ ಹೂವು ಬಿಡಿಸುವುದು ಎನ್ನುತ್ತಾರೆ. ಒಂದು ರೀತಿಯಲ್ಲಿ ಹೂವು ಬಿಡಿಸುವುದೇ ಸರಿ ಅಲ್ವಾ?" ಆಗ ನನ್ನ ತಲೆಯಲ್ಲೂ ಈ ವಿಷಯ ಕೊರೆಯಲು ಆರಂಭವಾಯಿತು. ಹೌದು, ಕೀಳುವುದು ಎಂದರೆ ಬಲವಂತವಾಗಿ ಒಬ್ಬರಿಂದ ಕಿತ್ತುಕೊಳ್ಳುವುದು. ನಾವು ಗಿಡದಿಂದ ಅದರದ್ದೇ ಆದ ವಸ್ತುಹೂವನ್ನು ನಮ್ಮದೇ ಹಕ್ಕೆಂಬಂತೆ 'ಕಿತ್ತು'ಕೊಳ್ಳುತ್ತೇವೆ. ಇನ್ನು 'ಕೊಯ್ಯು'ವುದರಲ್ಲಿ ಕೂಡ ಗಿಡದಿಂದ ಅದರ ಭಾಗವೊಂದನ್ನು 'ಬೇರ್ಪಡಿಸುವ' ಭಾವವಿದೆ. ಭಾರ್ಗವಿಯವರೆಂದಂತೆ ಹೂವು 'ಬಿಡಿಸು'ವುದೇ ಸರಿ. ಏಕೆಂದರೆ ಗಿಡಕ್ಕೆ ನೋವಾಗದಂತೆ ಹೂವನ್ನು ಮೃದುವಾಗಿ ಬಿಡಿಸಿ ಕೈಬುಟ್ಟಿಗೆ ಹಾಕಿಕೊಳ್ಳುತ್ತೇವೆ. ಅವರು ಇನ್ನೂ ಒಂದು ಸ್ವಾರಸ್ಯವಾದ ವಿಷಯ ಹೇಳಿದರು – "ನಮ್ಮಲ್ಲೆಲ್ಲ ಹೂವು ಕೀಳುವ (ಅಥವಾ ಬಿಡಿಸುವ) ಮೊದಲು ನಮ್ಮಮ್ಮ ಗಿಡಕ್ಕೆ ನಮಸ್ಕರಿಸಿ ಆಮೇಲೆ ಹೂವು ಕೀಳುತ್ತಿದ್ದರು." ಇದಂತೂ ನನಗೆ ಸ್ವಲ್ಪ ಹೊಸ ವಿಷಯವೇ ಆಗಿತ್ತು. ನನಗೆ ನಮ್ಮ ಕನ್ನಡದ 'ರಗಳೆ ಕವಿ' ಎನಿಸಿರುವ ಹರಿಹರ ಕವಿಯ ನೆನಪಾಯಿತು. ಶಿವನ ಪರಮಭಕ್ತನಾದ ಆತ ಬೆಳಕು ಮೂಡುವ ಮುನ್ನವೇ ಶಿವನಿಗಾಗಿ ಹೂವು ಕೊಯ್ಯಲು ಹೊರಡುತ್ತಿದ್ದನಂತೆ. ದುಂಬಿಗಳಿನ್ನೂ ಸ್ಪರ್ಶಿಸದ, ಮಕರಂದವನ್ನು ಹೀರದ ತಾಜಾ ಹೂಗಳನ್ನೇ ಆರಿಸಿ ಕೊಯ್ದು ಶಿವನಿಗೆ ತನ್ಮಯತೆಯಿಂದ ಸಮರ್ಪಿಸುತ್ತಿದ್ದನಂತೆ! ಇದರೊಂದಿಗೆ ನನಗೆ ನನ್ನ ಬಾಲ್ಯದಲ್ಲಿ ನಾವು ಹೂವು ಕಟ್ಟಿ ಮುಡಿಯುತ್ತಿದ್ದ ಸಂಭ್ರಮ ನೆನಪಾಯಿತು. ಮೃದು ಮನಸ್ಸಿನ ಹೆಣ್ಣುಮಕ್ಕಳಿಗೂ ಕೋಮಲವಾದ ಹೂಗಳಿಗೂ ಅವಿನಾಭಾವ ಸಂಬಂಧ.